# ತಲ್ಲೂರ ರಾಯನಗೌಡರು.

**ಶ್ರೀ ಯಲ್ಲಪ್ಪ ಬಸಪ್ಪ ಕಡಕೋಳ**
ಸಂಶೋಧನಾ ವಿದ್ಯಾರ್ಥಿ
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ–೫೯೧೧೫೬.

**ಡಾ.ಮಹೇಶ ಗಾಜಪ್ಪನವರ**
ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ–೫೯೧೧೫೬.

Article Link: https://aksharasurya.com/2023/08/yallappa-basappa-kadakol-mahesh-gajappanavar/

**ABSTRACT:**

ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಮಹನೀಯರು ತಮ್ಮನ್ನು ತೊಡಗಿಸಿಕೊಂಡು ತಮ್ಮದೇ ಆದ ವೈಶಿಷ್ಟ್ಯತೆಯ ಬದುಕಿನೊಂದಿಗೆ ಹೋರಾಡುವ ಮೂಲಕ ಹೆಸರುವಾಸಿಯಾಗಿರುವರು. ಅಂಥವರ ಬದುಕು ಬರಹಗಳು ಇಂದಿನ ಪೀಳಿಗೆಗೆ ದೊರೆಯಬೇಕು. ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ತಲ್ಲೂರ ರಾಯನಗೌಡರ ಹೆಸರು ಕೂಡ ಪ್ರಮುಖವಾಗಿದೆ. ಅವರು ಗಾಂಧೀಜಿಯವರ ಭಾಷಣದಿಂದ ಪ್ರಭಾವಿತರಾಗಿ ತಮ್ಮ ಎಲ್.ಎಲ್.ಬಿ. ಶಿಕ್ಷಣವನ್ನು ಮೊಟಕುಗೊಳಿಸಿ ಸ್ವಂತ ಊರಾದ ತಲ್ಲೂರಲ್ಲಿ ನೆಲೆಸಿ ಹತ್ತಿರದ ಮುರಗೋಡ ಗುಡ್ಡದಲ್ಲಿ ಭೂಗತರಾಗಿದ್ದುಕೊಂಡು ತಮ್ಮ ಸಹಚರರೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳುವ ಮೂಲಕ ಜೈಲುವಾಸ ಅನುಭವಿಸಿದವರು. ಸ್ವಾತಂತ್ರ್ಯ ನಂತರ ಕರ್ನಾಟಕ ಏಕೀಕರಣ ಮತ್ತು ಕಿತ್ತೂರು ಕುರಿತು ಸಂಶೋಧನೆಯಲ್ಲಿ ತೊಡಗಿಕೊಂಡು ತಮ್ಮದೇ ಆದ ಬರವಣಿಗೆ, ರಾಜಕೀಯ ಮತ್ತು ಸಾಮಾಜಿಕ ಬದುಕನ್ನು ಬದುಕಿ ಬಾಳಿದರು. ಅವರ ಕುರಿತು ಇದುವರೆಗೂ ಯಾವುದೇ ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗಳು ಜರುಗಿರುವುದಿಲ್ಲ. ತಲ್ಲೂರ ಗ್ರಾಮದಲ್ಲಿ ರಾಯನಗೌಡರ ಕುಟುಂಬದವರು ಮತ್ತು ಅವರನ್ನು ಹತ್ತಿರದಿಂದ ಕಂಡವರನ್ನು ಈ ಕುರಿತು ವಿಚಾರಿಸಿದಾಗ ಮಹತ್ವದ ಸಂಗತಿಗಳು ದೊರಕಿದವು. ಈ ಕುರಿತು ಅವರ ವ್ಯಕ್ತಿತ್ವದ ಮೇಲೆ ಈ ಬರಹ ಬೆಳಕು ಚಲ್ಲುತ್ತದೆ.

**KEYWORDS:** ರಾಯನಗೌಡರು, ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ, ಹೋರಾಟ, ರಾಜಕೀಯ, ಸಾಮಾಜಿಕ.

**ರಾಯನಗೌಡರ ಜೀವನ ಹಾಗೂ ಪರಿಸರ:**

ರಾಯನಗೌಡರು ೨೮–೨–೧೯೧೦ ರಂದು ತಲ್ಲೂರ ಗೌಡರ ಮನೆತನದಲ್ಲಿ ಜನಿಸಿದರು. ಇವರ ತಂದೆ ಲಿಂಗನಗೌಡ ತಾಯಿ ಬಸಮ್ಮ. ಅವರಿಗೆ ಇಬ್ಬರು ಗಂಡು ಮಕ್ಕಳಲ್ಲಿ ಎರಡನೆಯವರಾಗಿ ಜನಿಸಿದ ರಾಯನಗೌಡರು ತಮ್ಮ ಬಾಲ್ಯವನ್ನು ತಲ್ಲೂರು ಮತ್ತು ಮುರಗೋಡದಲ್ಲಿ ಕಳೆದರು. ಚಿಕ್ಕವರಿದ್ದಾಗಲೇ ತಾಯಿಯನ್ನು ಕಳೆದುಕೊಂಡ ಇವರ ಬದುಕು ಸಾಗಿದ್ದು ಅಜ್ಜಿ ಶ್ರೀಮತಿ ಸಿದ್ದಲಿಂಗಮ್ಮನವರ ಲಾಲನೆ ಪೋಷಣೆಯಲ್ಲಿ. ಸಿದ್ದಲಿಂಗಮ್ಮನವರು ರಾಯನಗೌಡರನ್ನು ತಾಯಿಯಿಲ್ಲದ ತಬ್ಬಲಿಯೆಂದು ಬಹಳ ಅಕ್ಕರೆಯಿಂದ ಅತ್ಯಂತ ಮುದ್ದು ಮುದ್ದಾಗಿ ಬೆಳೆಸಿದರು. ಪರಿಣಾಮವಾಗಿ ರಾಯನಗೌಡರು ಬಹು ತುಂಟ ಬಾಲಕನಾಗಿ ಬೆಳೆದರು. ಅವರ ತುಂಟುತನವು ಶಾಲೆ ಕಾಲೇಜುವರೆಗೂ ಬಂದಿತ್ತು.

**ವಿದ್ಯಾಭ್ಯಾಸ ಮತ್ತು ಪರಿಸರ:**

ರಾಯನಗೌಡರ ಪ್ರಾಥಮಿಕ ಶಿಕ್ಷಣ ತಲ್ಲೂರಿನಲ್ಲಿಯೇ ಆಯಿತು. ಅವರ ಶಿಕ್ಷಕರಾದ ಶ್ರೀ ಬಸಪ್ಪ ಮಲಕಣ್ಣವರ, ಬಸಲಿಂಗಪ್ಪ ಕಾಶಪ್ಪನವರ ಹಾಗೂ ದುಂಡಯ್ಯ ತೊರಗಲ್ಲಮಠರು ರಾಯನಗೌಡರ ಬಾಲ ಪ್ರತಿಭೆಯನ್ನು ಹೊರತರಲು ಶ್ರಮ ಪಟ್ಟಿದ್ದರು. ರಾಯನಗೌಡರು ತಮ್ಮ ಶಿಕ್ಷಣ ಮುಗಿದ ಮೇಲೂ ಹಾಗೂ ಅವರು ಸಾಮಾಜಿಕ ವ್ಯಕ್ತಿಯಾದ ಮೇಲೂ ಈ ಗುರುಗಳೊಡನೆ ಸ್ನೇಹ ಸಂಬಂಧವನ್ನು ಇಟ್ಟುಕೊಂಡಿದ್ದರು. ಮುಲ್ಕಿ ಪರೀಕ್ಷೆಯ ನಂತರ ಬಿ.ಎ. ಪದವಿಯನ್ನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ೧೯೩೨ ರಲ್ಲಿ ಸೇರಿದರು. ನಂತರ ಎಲ್.ಎಲ್.ಬಿ. ಅಭ್ಯಾಸಿಸಲು ಮುಂಬೈಗೆ ತೆರಳಿದರು.

**ಪ್ರಭಾವ ಮತ್ತು ಪ್ರೇರಣೆ:**

ರಾಯನಗೌಡರಿಗೆ ಸ್ವಾತಂತ್ರ್ಯದ ಹೋರಾಟದ ಪ್ರಭಾವ ಗಾಂಧೀಜಿಯವರ ಭಾಷಣಗಳ ಮೂಲಕ ಆಯಿತು. ನಂತರ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು. ೧೯೪೨ ರ ವರೆಗಿನ ಅವರ ಹೋರಾಟದ ಪುಟಗಳು ಅಮೋಘ. ನಂತರ ಶರಣಾಗತರಾಗಿ ಜೈಲುವಾಸ. ಸ್ವಾತಂತ್ರ್ಯ ನಂತರ ಸಂಶೋಧನೆ ಸಮಾಜಸೇವೆ ಇತರ ಚಟುವಟಿಕೆಗಳನ್ನು ಬೈಲಹೊಂಗಲದಲ್ಲಿ ಆರಂಭಿಸಿದರು. ರಾಣಿ ಚನ್ನಮ್ಮ ಇತಿಹಾಸ ಮಂಡಳದ ಕಾರ್ಯದರ್ಶಿಯಾಗಿ

ಜನತಾ ಸೇವಕ ಸಮಾಜ ಸಂಸ್ಥೆಯ ಚಟುವಟಿಕೆಯ ಮೂಲಕ ಕಿತ್ತೂರ ಮ್ಯೂಜಿಯಂ ಸ್ಥಾಪನೆ ಹಾಗೂ ಮಲ್ಲಸರ್ಜ ಕಾವ್ಯ ಸಂಪಾದನೆ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತ ೧೯೫೭ ರಲ್ಲಿ ಮುಂಬೈ ವಿಧಾನ ಸಭೆಗೆ ಗುಡಿಸಲು ಚಿನ್ಹೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲನನುಭವಿಸಿದರು. ಸ್ವಂತ ಬಲದ ಮೇಲೆ ಪ್ರಜಾ ಸಮಾಜವಾದೀ ಪಕ್ಷದ ಸಕ್ರೀಯ ಸದಸ್ಯರಾಗಿ ಮುಂದುವರೆದರು. ಕರ್ನಾಟಕದಲ್ಲಿ ಆ ಪಕ್ಷವನ್ನು ಬಲಪಡಿಸಲು ಶ್ರಮಿಸಿದರು. ಮಾರ್ಚ ೨೧ ೧೯೫೪ ರಲ್ಲಿ ಬೆಳಗಾವಿಯಲ್ಲಿ ನಡೆದ ಪಕ್ಷದ ಸಭೆಯಲ್ಲಿ ಕರ್ನಾಟಕ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾದರು. ಅವರ ಸೋಲು ಅವರನ್ನು ದೃತಿಗೆಡಿಸಿತು. ಅಷ್ಟೇ ತಮ್ಮ ಜೀವಿತಾವಧಿಯವರೆಗೂ ಅವರು ಸಮಾಜ ಸೇವೆ ಮತ್ತು ಬರವಣಿಗೆಯಲ್ಲಿ ತೊಡಗಿಸಿಕೊಂಡರು.

ರಾಯನಗೌಡರು ತಾವು ಸ್ಥಾಪಿಸಿದ್ದ ಜನತಾ ಸೇವಕ ಸಮಾಜ(ಸಾಹಿತ್ಯ) ದಿಂದ "ಕರ್ನಾಟಕದ ಗಡಿಗೆರೆಗಳು ಭಾಗ–೧" ಎಂಬ ಪುಸ್ತಕವನ್ನು ಬರೆದು ಕರ್ನಾಟಕದ ವಿವಿಧ ಭಾಗಗಳು ಬೇರೆ ಬೇರೆ ರಾಜ್ಯದಲ್ಲಿ ಹಂಚಿಹೋಗಿದ್ದನ್ನು ಕನ್ನಡಿಗರ ಅವಗಾಹನೆಗೆ ತಂದಿರುವರು. ಇವರ ಮನೆಯಲ್ಲಿ ಇವರದೇ ಆದ ಒಂದು ಕೊಠಡಿ. ಅಲ್ಲಿ ಒಂದು ಕಟ್ಟಿಗೆಯ ಖುರ್ಚಿ. ಖಾದಿ ಗ್ರಾಮೋದ್ಯೋಗ ಭಂಡಾರದಿಂದ ತಂದಿದ್ದ ಆಯ್ದ ಸೋಪಾನಗಳು ಮಧ್ಯದಲ್ಲಿ ಹೂವಿನ ಗುಚ್ಚದಿಂದಾವೃತವಾದ ಕುಂಡ. ಅಲ್ಲಿ ತಮ್ಮ ಅರಾಮ ಕುರ್ಚಿಯಲ್ಲಿ ಕುಳಿತು ಪ್ರತಿ ದಿನ ಬೆಳಗಿನ ೭ ಗಂಟೆಯಿಂದ ೯ ಗಂಟೆಯವರೆಗೆ ತಮ್ಮ ನಿಕಟವರ್ತಿಗಳೊಂದಿಗೆ ಪತ್ರ ಬರೆಯುವ ದಿನಚರಿ. ಹಾಗೆಯೇ ಯಾರಾದರೂ ಭೇಟಿಗೆ ಬಂದರೆ ಅವರ ಉಭಯ ಕುಶಲೋಪಚರಿ ವಿಚಾರಿಸಿ ಅವರ ಕಾರ್ಯಕ್ಕೆ ಕೈ ಜೋಡಿಸುವುದು ನಿತ್ಯದ ದಿನಚರಿಯಾಗಿತ್ತು ಎಂದು ಅವರ ಮಗಳು ದೇವಿಕಾರಾಣಿ ಹೇಳುತ್ತಾರೆ. 'ಎತ್ತರದ ಕಟ್ಟು ಮಸ್ತಾದ ಕಾಯ, ಪ್ರತಿಭೆ ಸೂಸುವ ಕಣ್ಣು, ನಯ, ವಿನಯ, ಗೌರವರ್ಣ, ಸದಾ ಹಸನ್ಮುಖಿ, ಅಪ್ಪಟ ಭಾರತೀಯ ರೈತ ನನ್ನ ತಂದೆ' ಎಂದು ಅವರು ತಮ್ಮ ತಂದೆಯ ಕುರಿತು ಹೇಳುವಾಗ ಅವರ ಪೋಟೋ ನೋಡಿದರು ಸಾಕು ಅವರ ವ್ಯಕ್ತಿತ್ವ ನಮ್ಮ ಕಣ್ಮುಂದೆ ಬರುವುದು.

ಪ್ರತಿ ದಿನವೂ ತಲ್ಲೂರಲ್ಲಿ ಇದ್ದಾಗ ಮುಂಜಾವಿನ ೫ ಗಂಟೆಗೆ ಎದ್ದು ೨.೪ ಕಿ.ಮೀ ಅಂತರದಲ್ಲಿರುವ ತಮ್ಮ ಹೊಲಗಳಿಗೆ ಭೇಟಿ ನೀಡುವುದು. ನಿಸರ್ಗದ ಬಗ್ಗೆ ತಮ್ಮ ಮಕ್ಕಳಿಗೆ ಹೇಳುತ್ತ ಸಾಗುವುದು ಅವರೊಟ್ಟಿಗೆ ಮಕ್ಕಳನ್ನು ಕರೆದುಕೊಂಡು ಸಂಚಾರಕ್ಕೆ ಹೊರಡುತ್ತಿದ್ದ ರೀತಿಯನ್ನು ಅವರ ಮಗಳು ದೇವಿಕಾರಾಣಿ

ಹೇಳುವುದನ್ನು ಕೇಳಿದರೆ ನಿಜಕ್ಕೂ ಅವರ ದೈನಂದಿನ ದಿನಚರಿ ಅದ್ಭುತ ಮತ್ತು ಶಿಸ್ತಿನಿಂದ ಕೂಡಿತ್ತು ಎಂಬುದನ್ನು ನಾವು ಕಾಣಬಹುದು.

**ರಾಜಕೀಯ ಬದುಕು:**

ಭಾರತ ೧೯೪೭ ರಲ್ಲಿ ಸ್ವತಂತ್ರವಾಯಿತು. ಸ್ವಾತಂತ್ರ್ಯ ನಂತರ ರಾಯನಗೌಡರು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ರಾಜಕೀಯ ಜೀವನ ಆರಂಭಿಸಿದರು. ನಾಡಿನ ಎಲ್ಲ ನಾಯಕರೊಡನೆ ಉತ್ತಮ ಸಂಬಂಧ ಹೊಂದಿದ್ದ ರಾಯನಗೌಡರು ಚುನಾವಣೆಗೆ ನಿಲ್ಲುವ ಮಹದಾಸೆ ಹೊಂದಿದ್ದರು. ಆದರೆ ಅವರಿಗೆ ಚುನಾವಣೆ ಟಿಕೇಟು ನಿರಾಕರಿಸಲಾಯಿತು. ಹೀಗಾಗಿ ೧೯೫೨ ಮುಂಬೈ ವಿಧಾನ ಸಭೆಗೆ ಗುಡಿಸಲು ಚಿನ್ಹೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲನನುಭವಿಸಿದರು. ಸ್ವಂತ ಬಲದ ಮೇಲೆ ಪ್ರಜಾ ಸಮಾಜವಾದೀ ಪಕ್ಷದ ಸಕ್ರೀಯ ಸದಸ್ಯರಾಗಿ ಮುಂದುವರೆದರು. ಕರ್ನಾಟಕದಲ್ಲಿ ಆ ಪಕ್ಷವನ್ನು ಬಲಪಡಿಸಲು ಶ್ರಮಿಸಿದರು. ಮಾರ್ಚ ೨೧ ೧೯೫೪ ರಲ್ಲಿ ಬೆಳಗಾವಿಯಲ್ಲಿ ನಡೆದ ಪಕ್ಷದ ಸಭೆಯಲ್ಲಿ ಕರ್ನಾಟಕ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾದರು. ಅವರ ಸೋಲು ಅವರನ್ನು ದೃತಿಗೆಡಿಸಿತು. ಅಷ್ಟೇ ತಮ್ಮ ಜೀವಿತಾವಧಿಯವರೆಗೂ ಅವರು ಸಮಾಜ ಸೇವೆ ಮತ್ತು ಬರವಣಿಗೆಯಲ್ಲಿ ತೊಡಗಿಸಿಕೊಂಡರು.

**ಸಾಮಾಜಿಕ ಕಾರ್ಯಗಳು:**

ರಾಯನಗೌಡರು ಸಾಮಾಜಿಕವಾಗಿ ಹಲವು ಸಂಘ ಸಂಸ್ಥೆಗಳ ಅಜೀವ ಸದಸ್ಯರಾಗಿ, ಕಾರ್ಯಾಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಕಾರ್ಯ ಮಾಡಿದರು. ರಾಯನಗೌಡರು ಮುಂಬೈಗೆ ಕಾನೂನು ವಿದ್ಯಾಭ್ಯಾಸಕ್ಕೆ ಹೋದ ನಂತರ ಮುಂಬೈದಲ್ಲಿ ೧೨-೫-೧೯೩೭ ರಂದು ಲಿಂಗಾಯತ ಉನ್ನತಿ ಸಂಘವನ್ನು ಸ್ಥಾಪಿಸಿದರು. ಅವರು ಈ ಕೆಳಗಿನ ಸಂಘ ಸಂಸ್ಥೆಗಳೊಡನೆ ಸಂಬಂಧವಿಟ್ಟುಕೊಂಡಿದ್ದರು.

೧. ಚೇರಮನ್, ಚನ್ನಮ್ಮ ರಾಣಿ ಇತಿಹಾಸ ಮಂಡಳ, ಬೈಲಹೊಂಗಲ. ೧೯೪೪-೬೭.
೨. ಉಪಾಧ್ಯಕ್ಷ, ರಾಜ್ಯ ಕೃಷಿಕ ಸಮಾಜ. ೧೯೬೦-೬೯.
೩. ಭಾರತೀಯ ಕೃಷಿಕ ಸಮಾಜ ಆಡಳಿತ ಸಮಿತಿಯ ಸದಸ್ಯ. ೧೯೬೦-೬೯.
೪. ರಾಣಿ ಚನ್ನಮ್ಮ ಸಮಿತಿ, ಮೈಸೂರು (ರಾಜ್ಯ ಮಟ್ಟದಲ್ಲಿ). ೧೯೬೫-೬೯.
೫. ಕರ್ನಾಟಕ ವಿಶ್ವವಿದ್ಯಾಲಯದ ಸೆನೇಟ್ ಸದಸ್ಯ. ೧೯೫೧-೬೯.

೬. ಬಸವೇಶ್ವರರ ೮೦೦ ನೇ ಜನ್ಮದಿನ ಸಮಾರಂಭದ ಸಮಿತಿ ಸದಸ್ಯ. ೧೯೬೫–೬೯.

೭. ಐತಿಹಾಸಿಕ ಮತ್ತು ಪುರಾತತ್ವ ಕಮೀಟಿ, ಮೈಸೂರು ರಾಜ್ಯ. ೧೯೬೦–೬೯.

ಹೀಗೆ ವಿವಿಧ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದುಕೊಂಡು ಸಾಮಾಜಿಕವಾಗಿ ಹತ್ತು ಹಲವು ಕಾರ್ಯಗಳನ್ನು ಮಾಡಿದರು.

**ಸಾಹಿತ್ಯಕ ಜೀವನ (ಜನಪದ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳು):**

"ತಲ್ಲೂರು ರಾಯನಗೌಡರು ಸಮಗ್ರ ಅಧ್ಯಯನ" ಬಹುಮುಖಿಯಾಗಿ ನಡೆಯುವಂತದ್ದು. ರಾಯನಗೌಡರು ವಿದ್ಯಾರ್ಥಿಯಾಗಿದ್ದಾಗ ಕನ್ನಡ ಮತ್ತು ಇಂಗ್ಲೀಷ ಹಾಗೂ ಇತಿಹಾಸ ವಿಷಯಗಳಲ್ಲಿ ಆಸಕ್ತರಿದ್ದರು. ಆ ವಿಷಯಗಳ ಅಧ್ಯಯನವನ್ನು ತಮಗೆ ಸಾಧ್ಯವಾದಷ್ಟು ಆಳವಾಗಿಯೇ ಮಾಡಿದ್ದರು. ಕಿತ್ತೂರು ಸಂಸ್ಥಾನದ ಕುರಿತು ಎರಡು ಕೃತಿಗಳನ್ನು ತಮ್ಮ ಸಂಪಾದಕತ್ವದಲ್ಲಿ ಪ್ರಕಟಿಸಿದ ಇವರು ಕಿತ್ತೂರು ಬರಹದ ಜೊತೆಗೆ ನಾಡಿನ ವಿವಿಧ ಕ್ಷೇತ್ರಗಳ ಕುರಿತು ಬರಹಗಳನ್ನು ರೂಪಿಸಿದ್ದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕನಕದಾಸರು–ಕಾಗಿನೆಲೆ, ಶಿಶುನಾಳ ಶರೀಫರು, ಬಸವಣ್ಣ–ವೀರಶೈವ ಐತಿಹ್ಯಗಳು,

ಬಸವಣ್ಣನವರ ಐಕ್ಯದ ನಂತರ ಕೆಲವು ಘಟನೆಗಳನ್ನು ಹಾಗೂ ಚನ್ನಬಸವಣ್ಣ ಮತ್ತು ಶರಣರು ಕಲ್ಯಾಣದಿಂದ ಉಳುವಿಗೆ ಹೋಗುವ ದಾರಿಯಲ್ಲಿಯ ಐತಿಹ್ಯಗಳ ಬಗ್ಗೆ ಇವರು ಬರೆದಿರುವ ಬರಹಗಳು ಬೆಳಕು ಚಲ್ಲುತ್ತವೆ.

ರಾಯನಗೌಡರು ಬಹು ಭಿನ್ನವಾದ ಸಾಹಿತಿಗಳಾಗಿದ್ದರು. ಅವರು ವಿದ್ಯಾರ್ಥಿಯಾಗಿದ್ದಾಗಲೇ ವ್ಯಾಪಕವಾಗಿ ಬರೆಯಲು ಪ್ರಾರಂಭಿಸಿದ್ದರು ಎಂಬ ಅಂಶವನ್ನು ಅವರ ಮಗಳಾದ ದೇವಿಕಾರಾಣಿಯವರು ಹೇಳುವ ಜೊತೆಗೆ ಅವರ ಬರಹಗಳನ್ನು ಒದಗಿಸಿದರು. ಅವರ ಸಾಹಿತ್ಯವನ್ನು ನಾವು ಐದು ಗುಂಪುಗಳಾಗಿ ವಿಭಾಗಿಸಬಹುದು.

1. ಐತಿಹಾಸಿಕ
2. ಧಾರ್ಮಿಕ ಮತ್ತು ಅಧ್ಯಾತ್ಮಿಕ
3. ಜನಪದ
4. ವಿಜ್ಞಾನ
5. ವ್ಯಕ್ತಿ ವಿಶ್ಲೇಷಣೆಗಳು

**ಇನ್ನಿತರ ಚಟುವಟಿಕೆಗಳು (ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಕ್ಕೆ ನೀಡಿದ ಕೊಡುಗೆಗಳು):**

ಕರ್ನಾಟಕ ಪ್ರಕಾಶನದ ಡಾ. ಎಚ್. ಎಸ್. ಗೋಪಾಲರಾವ್ ಅವರ ಕರ್ನಾಟಕ ಏಕೀಕರಣ ಇತಿಹಾಸ ಕೃತಿಯನ್ನು ಮತ್ತು ಕಿತ್ತೂರು ಚನ್ನಮ್ಮ ರಾಣಿ ಇತಿಹಾಸ ಮಂಡಲ ವರದಿ ಮತ್ತು ಘಟನೆ ಕುರಿತು ಪುಸ್ತಕವನ್ನು ನಾನು ಧಾರವಾಡದ ಸಮಾಜ ಪುಸ್ತಕಾಲಯದಿಂದ ತಂದೆನು ಅದರಲ್ಲಿ ಕರ್ನಾಟಕ ಏಕೀಕರಣ ಕುರಿತು ಅಧ್ಯಯನವನ್ನು ಕೈಗೊಂಡೆನು.

ಕರ್ನಾಟಕ ಇತಿಹಾಸ ಏಕೀಕರಣ ಕೃತಿಯಲ್ಲಿ ಮಿಶ್ರಾ ಆಯೋಗದ ವರದಿಯ ಪುಟಗಳನ್ನು ಗಮನಿಸಿದೆ. (ಪುಟ ಸಂಖ್ಯೆ. ೧೯೨–೧೯೩) ಬಳ್ಳಾರಿ ತಾಲೂಕಿನ ಸಮಸ್ಯೆಯು ಭಾಷಾತ್ಮಕ ಮಾತ್ರವಾಗಿರದೆ ತುಂಗಭದ್ರಾ ಆಣೆಕಟ್ಟೆಗೆ ಸಂಬಂಧಿಸಿದಂತೆಯೂ ಇತ್ತು. ಇದನ್ನು ಬಗೆಹರಿಸಲು ಭಾರತದ ರಾಷ್ಟ್ರಪತಿಗಳು ಹೈದರಾಬಾದ್‌ನ ಮುಖ್ಯ ನ್ಯಾಯಾಧೀಶ ಎಲ್. ಎಸ್. ಮಿಶ್ರಾ ಅವರನ್ನು ನೇಮಿಸಿದ ಆಜ್ಞೆಯು ೨೧–೪–೧೯೫೩ ರಲ್ಲಿ ಪ್ರಕಟವಾಯಿತು. ೨೩–೪–೧೯೫೩ ರಿಂದ ಕಾರ್ಯಾರಂಭ ಮಾಡಿ ೧೫–೫–೧೯೫೩ ರ ಒಳಗೆ ವರದಿಯನ್ನು ಸಲ್ಲಿಸಬೇಕೆಂದು ಎಲ್. ಎಸ್.ಮಿಶ್ರಾ ಅವರನ್ನು ಕೋರಲಾಯಿತು.

೨೫–೩–೧೯೫೩ ರಂದು ಆಂಧ್ರ ಪ್ರಾಂತ ರಚನೆಗೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ಚರ್ಚೆ ಮತ್ತು ಮಿಶ್ರಾ ಸಮಿತಿಯ ನೇಮಕವಾದ ನಂತರ ಕನ್ನಡಿಗರ ಅತೃಪ್ತಿ ಅಸಂತೋಷಗಳು ಅಧಿಕವಾದವು. ಕೆ.ಪಿ.ಸಿ.ಸಿ.ಯ ನಾಯಕರಿಗೂ ಅದರ ಕಾವು ತಟ್ಟಿತ್ತು. ಹೈದರಾಬಾದಿನ (ನಾನಲ ನಗರ)ಲ್ಲಿ ನಡೆದ ವಾರ್ಷಿಕ ಕಾಂಗ್ರೆಸ್ ಅಧಿವೇಶನದ ಫಲಶ್ರುತಿಯೂ ಕೆ.ಪಿ.ಸಿ.ಸಿ. ನಾಯಕರು ಮತ್ತು ಇತರ ಪಕ್ಷೇತರ ಕರ್ನಾಟಕ ಏಕೀಕರಣವಾದಿಗಳಿಗೆ ನೋವುಂಟು ಮಾಡಿದ್ದವು. ಇದೇ ನೋವಿನ ವಾತಾವರಣದಲ್ಲಿ ೧೯–೪–೧೯೫೩ ರಂದು ಹುಬ್ಬಳ್ಳಿಯಲ್ಲಿ ಕೆ.ಪಿ.ಸಿ.ಸಿ.ಯ ವಿಶೇಷ ಸಭೆಯನ್ನು ನಡೆಸಲು ಏರ್ಪಾಡಾಗಿತ್ತು. ಕಾಂಗ್ರೇಸ್ಸೇತರ ರಾಜಕೀಯ ಪಕ್ಷಗಳು ೧೯೫೧ರ ಮೇ ತಿಂಗಳಿನಲ್ಲೇ ಸ್ಥಾಪಿಸಿ, ಆ ನಂತರ ಗಣರಾಜ್ಯದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧೆಗೂ ಇಳಿದಿದ್ದ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು ಪ್ರಬಲವಾಗುತ್ತಿತ್ತು.

ಚುನಾವಣೆಯಲ್ಲಿ ಸೋತರೂ ಕರ್ನಾಟಕ ಏಕೀಕರಣದ ಬೇಡಿಕೆಗೆ ಪ್ರಬಲವಾದ ಚಾಲನೆಯನ್ನೊದಗಿಸಿದ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು ಆಂಧ್ರ ಪ್ರಾಂತ ರಚನೆಯ ಸಂಬಂಧ ವಾಂಛೂ ಸಮಿತಿಯ ನೇಮಕವಾಗಿ

ಸದ್ಯಕ್ಕೆ ಕರ್ನಾಟಕ ಪ್ರಾಂತ ರಚನೆ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗುತ್ತಿದ್ದಾಗಲೇ ಕಾಂಗ್ರೇಸ್‌ನ ಧೋರಣೆಗಳನ್ನು ಸಂಪೂರ್ಣವಾಗಿ ವಿರೋಧಿಸಿ ತನ್ನದೇ ಆದ ರೀತಿಯಲ್ಲಿ ಪ್ರತಿಭಟನೆಯನ್ನು ಪ್ರಕಟಿಸಲಾರಂಭಿಸಿತು.

ಸಮಾಜವಾದಿ ಮತ್ತು ಕಮ್ಯುನಿಷ್ಟ ಪಕ್ಷಗಳು ಕರ್ನಾಟಕ ಏಕೀಕರಣ ಬೇಡಿಕೆಯನ್ನು ಪ್ರಧಾನವಾಗಿಸಿದವು. ಎಸ್. ಗೋಪಾಲಗೌಡರು, ಬಿ. ವಿ. ಕಕ್ಕಿಲ್ಲಾಯ, ಅಳವಂಡಿ ಶಿವಮೂರ್ತಿಸ್ವಾಮಿ ಮುಂತಾದ ರಾಜಕೀಯ ಪಟುಗಳು ಶತಾಯಗತಾಯ ಕರ್ನಾಟಕ ಏಕೀಕರಣ ಸಾಧಿಸಲೇಬೇಕೆಂದು ಪಣ ತೊಟ್ಟಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಜನತೆಯನ್ನು ಉದ್ದೇಶಿತ ಕಾರ್ಯಗಳಿಗೆ ಅಣಿಗೊಳಿಸಿದರು. ಅವರ ನೆರವಿಗೆ ಅನೇಕ ಜನನಾಯಕರು ಮುಂದೆ ಬಂದರು. ಜಯದೇವಿತಾಯಿ ಲಿಗಾಡೆ, ಶಾಂತಿನಾಥ ಇಂಗಳೆ, ಇಂಚಗೇರಿಯ ಮಹಾದೇವಪ್ಪ ಮುರುಗೋಡು, ಚನ್ನಪ್ಪ ವಾಲಿ, ತಲ್ಲೂರ ರಾಯನಗೌಡ, ಕೋಟ ರಾಮಕೃಷ್ಣ ಕಾರಂತ, ಹೊಸಮನಿ ಸಿದ್ದಪ್ಪ, ಕೋ. ಚನ್ನಬಸಪ್ಪ ಮುಂತಾದ ಪ್ರಮುಖರು ಪಕ್ಷೇತರ ಕರ್ನಾಟಕ ಏಕೀಕರಣ ಹೋರಾಟದ ಸಂಘಟನೆಗೆ ಬೆಂಬಲಿಸಿದರು.

೧೯೪೬ ರ ಆಗಸ್ಟ ೧೦ ಮತ್ತು ೧೧ ರಂದು ಆದವಾನಿಯಲ್ಲಿ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಆಗ ಗುತ್ತಿಯಲ್ಲಿ ಜಿಲ್ಲಾ ಮುನಿಸೀಪ್ ಆಗಿದ್ದ ಟಿ. ಎಚ್. ಎಂ. ಸದಾಶಿವಯ್ಯನವರು ಸಮ್ಮೇಳನದ ಅಧ್ಯಕ್ಷರಾಗಿದ್ದರು. ಆ ನಂತರ ಅವರು ೧೯೪೯ ರಲ್ಲಿ 'ಕರ್ನಾಟಕದ ಗಡಿ ಗೆರೆಗಳು (ಪೂರ್ವಾರ್ಧ)' ಎಂಬ ಕೃತಿಯ ಮೂಲಕ ಕರ್ನಾಟಕದ ಗಡಿಗಳನ್ನು ನಿರ್ಣಯಿಸುವ ಸಾರ್ಥಕ ಪ್ರಯತ್ನ ಮಾಡಿದ್ದರು. 'ಶಿವಸುತ' ಎಂಬ ಹೆಸರಿನಲ್ಲಿ ರಚಿತವಾದ ಕೃತಿಯ ಸಂಪಾದಕರು ತಲ್ಲೂರ ರಾಯನಗೌಡರು. ಈ ಕೃತಿಗೆ ಮುನ್ನುಡಿ ಬರೆದವರು ಹಾಲಬಾವಿ ವೀರಭದ್ರಪ್ಪನವರು. ಕೃತಿಯ ಪ್ರಕಟಣೆಗೆ ನೆರವಾದವರು ಬಸರೀಗಿಡದ ವೀರಪ್ಪನವರು.

ವಿವಿಧ ಆಡಳಿತಗಳಲ್ಲಿ ಹರಿದು ಹಂಚಿಹೋಗಿರುವ ಕರ್ನಾಟಕವನ್ನು ಆಕ್ರಮಿಸಲು ಬೇರೆ ಭಾಷಿಕರು ಗಡಿ ಭಾಗಗಳಲ್ಲಿ ನಡೆಸಿದ್ದ ಪ್ರಯತ್ನಗಳನ್ನು ಖಂಡಿಸಿ ಅಖಿಲ ಕರ್ನಾಟಕದ ನಿರ್ಮಾಣದ ಅವಶ್ಯಕತೆಗಳನ್ನು ಮನಗಾಣಿಸಿದ್ದರು. 'ಅಳಿವೋ ಉಳಿವೋ?' ಎಂಬ ಕೊನೆಯ ಪ್ರಶ್ನೆಯು ಎದ್ದಿರುವ ಈ ಸಮಯದಲ್ಲಿ 'ಕನ್ನಡಿಗರು ಕೈ ಕಟ್ಟಿಕೊಂಡು ಕುಳಿತರೆ ಕನ್ನಡ ಇತಿಹಾಸದಲ್ಲಿ ಇದೇ ಕೊನೆಯ ಪ್ರಕರಣವಾಗುವುದು. ಈ ವಿಷಾದಾಂತ ಪ್ರಕರಣಕ್ಕೆ ಇಂದಿನ ಪೀಳಿಗೆಯೇ ಕಾರಣವೆಂದು ಮುಂದಿನವರು ಬೆರಳು ಮಾಡಿ ತೋರಿಸುವರು. ಆದ ಕಾರಣ

ಪ್ರತಿಯೊಬ್ಬ ಕನ್ನಡಿಗನು ಎಚ್ಚೆತ್ತು ನಾಡಿನ ಗಡಿಗಳನ್ನು ಕಾಯ್ದುಕೊಳ್ಳುವ ದೀಕ್ಷೆಯನ್ನು ವಹಿಸಬೇಕು. ಇನ್ನೊಬ್ಬರ ನೆಲದಲ್ಲಿ ಒಂದು ಅಂಗುಲವಾದರೂ ನಮಗೆ ಬೇಡ, ಆದರೆ ನಮ್ಮದನ್ನು ನಮ್ಮದಾಗ ಇಟ್ಟುಕೊಳ್ಳುವುದರಲ್ಲಿ ಔದಾಸಿನ್ಯ ಬೇಡ' ಎಂದು ಕನ್ನಡಿಗರಲ್ಲಿ ಕಳಕಳಿ ಮನವಿ ಮಾಡಿಕೊಂಡಿರುವ ಟಿ. ಎಚ್. ಎಂ. ಸದಾಶಿವಯ್ಯನವರು ಗಡಿಯ ನಿರ್ಣಯಕ್ಕೆ 'ಮನೆನಾಡಿನ ತತ್ವ' ಅವಶ್ಯಕವೆಂದು ನಂಬಿದ್ದರು. (ಕರ್ನಾಟಕದ ಗಡಿ ಗೆರೆಗಳು (ಪೂರ್ವಾರ್ಧ), ಶಿವಸುತ, ಸಂ. ತಲ್ಲೂರ ರಾಯನಗೌಡ ಪಾಟೀಲ, ಬೈಲಹೊಂಗಲ, ೧೯೪೯, ಪು.ಸಂ. ೪) ಈ ಮಾಹಿತಿ ಕರ್ನಾಟಕ ಏಕೀಕರಣ ಇತಿಹಾಸ ಡಾ. ಎಚ್. ಎಸ್. ಗೋಪಾಲರಾವ್, ಪುಟ ಸಂಖ್ಯೆ ೧೧೯, ಆರನೇ ಮುದ್ರಣ ೨೦೧೪)

**ರಾಯನಗೌಡರ ಸಂಶೋಧನಾ ಸಾಹಿತ್ಯ:**

ಇವರು ತಮ್ಮ ರಾಜಕೀಯ ಬದುಕಿನ ನಂಟಿನ ಜೊತೆಗೆ ಆಕಾಶವಾಣಿ ಧಾರವಾಡ ಕೇಂದ್ರಕ್ಕೆ ಚಿಂತನ ಕೃಷಿರಂಗ ಜನಪದ ಗೀತೆಗಳನ್ನು, ಜನಪದ ಸಂಸ್ಕೃತಿ ಕುರಿತಂತೆ ಭಾಷಣಗಳನ್ನು ಮಾಡುತ್ತಿದ್ದರು. ಇವರ ಭಾಷಣ ಮತ್ತು ಚಿಂತನಗಳು ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದರೆ ಮನೆಯಲ್ಲಿ ಎಲ್ಲರೂ ಒಂದೆಡೆ ಕುಳಿತು ಅದನ್ನು ಆಲಿಸುತ್ತಿದ್ದರಂತೆ. ಹೀಗೆ ಬರೆದಿಡುವ ರೂಢಿಯನ್ನು ಅವರು ಉಳಿಸಿಕೊಂಡು ಬಂದ ಪರಿಣಾಮವೇ ಅವರ ಬರಹಗಳು ಅಂದು ಸಂಯುಕ್ತ ಕರ್ನಾಟಕ, ಕರ್ಮವೀರ ವಾರಪತ್ರಿಕೆ, ಪಾಟೀಲ ಪುಟ್ಟಪ್ಪನವರ ಪ್ರಪಂಚ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು.

**ಮಲ್ಲಸರ್ಜ ಕಾವ್ಯ:**

ಇದನ್ನು ತಲ್ಲೂರ ರಾಯನಗೌಡರು ಸಂಪಾದಿಸಿರುವರು. ತಮ್ಮ ನುಡಿಗಳಲ್ಲಿ ಅವರು ಈ ಕಾವ್ಯ ಯಾರದು ಎಂಬ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದು ಇದು ಇತಿಹಾಸ ಗ್ರಂಥವೋ, ಕಾವ್ಯ ಸಾಹಿತ್ಯವೋ ಇದನ್ನು ನಿರ್ಣಯಿಸುವ ಗೋಜಿಗೆ ನಾವು ಹೋಗುವುದಿಲ್ಲ. ಇದೊಂದು ಐತಿಹಾಸಿಕ ಕಾವ್ಯ. ಇಲ್ಲಿನ ನಾಯಕನು ಅವನ ಸಾಹಸಗಳು ಕಾಲ್ಪನಿಕವಲ್ಲ. ಮಲ್ಲಸರ್ಜ ಪ್ರಭುವೇ ಈ ಕೃತಿಯ ನಾಯಕ. ಆತನು ಕಿತ್ತೂರು ಆಳುತ್ತಿರುವಾಗ ಪೇಶ್ವೆ ಭಾಜೀರಾಯನು ಕರ್ನಾಟಕಕ್ಕೆ ದಂಡೆತ್ತಿ ಬಂದನು. ಮಲ್ಲಸರ್ಜ ಪ್ರಭುವು ಪೇಶ್ವೆ ಭಾಜೀರಾಯನ ಸಾಮಂತನಾಗಲಿಕ್ಕೂ ಮತ್ತು ಕಾಣಿಕೆ ಕಪ್ಪ ಒಪ್ಪಿಸಲಿಕ್ಕೂ ಸಿದ್ದನಾಗಲಿಲ್ಲ. ಮುಂದೆ ಶೇಗುಣಸಿ ಗೌಡರು ಸಂಧಾನುಧೂತರಾಗಿ ಬಂದು ಪೇಶ್ವೆಯವರ ಬಿಡಾರಕ್ಕೆ ಕರೆತಂದರು. ಕೂಡಲೇ ಪೇಶ್ವೆ ಸರಕಾರವು ರಾಜಬಂಧಿಯಾಗಿ ಮಲ್ಲಸರ್ಜನನ್ನು ಪುಣೆಗೆ ಒಯ್ದರು.

ಅಲ್ಲಿಯ ಬಂಧಿಯ ನಿವಾಸದಲ್ಲಿ ಮಲ್ಲಸರ್ಜ ಪ್ರಭುವಿಗೆ ನಸೀಕ್ಷಯ ರೋಗವು ಹತ್ತಿತು. ತಿರುಗಿ ಕಿತ್ತೂರ ರಾಜಧಾನಿಗೆ ಬರುವಷ್ಟರಲ್ಲಿ ಆ ರೋಗ ಉಗ್ರರೂಪ ತಾಳಿ ರಾಜವಾಡೆಯಲ್ಲಿ ಬಂದಿಳಿದ ಮೂರು ನಾಲ್ಕು ದಿನಗಳಲ್ಲಿ ಮೃತಪಡಬೇಕಾಯಿತು.

ಪ್ರಸ್ತುತ ಕಾವ್ಯ ರುದ್ರಕವಿ ಎಂಬ ಕವಿ ಬರೆದಿರಬಹುದು ಎಂದು ಊಹಿಸಬಹುದು ಎಂಬ ಸತ್ಯಕ್ಕೆ ರಾಯನಗೌಡರು ಬರುವರು. ಇಲ್ಲಿ ಶರಣರ ನಾಡು ಕಿತ್ತೂರು ಎಂಬ ದುಂಧುಭಿಯಿಂದ ಈ ಕೃತಿ ಆರಂಭವಾಗಿ ಪೇಶ್ವೆ ದಂಡಿನ ಪಯಣ, ಭಾಜೀರಾಯಣ ಪಯಣ (ಪುಣ್ಯಕ್ಷೇತ್ರ ದರ್ಶನ), ಮಲ್ಲಭೂಪನ ಸೈನ್ಯ ಸಿದ್ದತೆ ಮತ್ತು ಬೀಳ್ಕೊಡುವ ಸಂಭ್ರಮ, ಶೇಗುಣಸಿ ಗೌಡರ ಕುಟಿಲ ರಾಯಭಾರ, ಮಲ್ಲಭೂಪನ ಮೇಲೆ ಕಾವಲು, ಭಾಜೀರಾಯನ ಮೇಜವಾನಿ ಸಮಾರಂಭ ಮಲ್ಲಭೂಪನಿಗೆ ಔತಣ, ಅತ್ತೆಯ ಮರಣ ವಾರ್ತೆ ಮತ್ತು ಮಲ್ಲಭೂಪನ ಹೃದ್ರೋಗ, ಮಲ್ಲಭೂಪನ ವ್ಯವಸ್ಥಾ ಪತ್ರ, ಮಲ್ಲಭೂಪನ ಬಿಡುಗಡೆ ಹಾಗೂ ತೀರ್ಥಯಾತ್ರೆ, ಮಲ್ಲಭೂಪನ ಕಾಯಿಲೆ ಹಾಗೂ ಮರಣ, ಚನ್ನಮ್ಮ ರಾಣಿಯ ಪ್ರಲಾಪ, ಮಲ್ಲಭೂಪನ ಸ್ಮಶಾನ ಯಾತ್ರೆ ಹೀಗೆ ಒಟ್ಟು ಹದಿಮೂರು ಭಾಗಗಳಲ್ಲಿ ಈ ಕಾವ್ಯವಡಗಿದೆ. ಇಲ್ಲಿ ಪ್ರತಿ ಭಾಗವು ಒಂದೊಂದು ಘಟನೆಗಳನ್ನು ಹೇಳುತ್ತ ಸಾಗುವುದು. ಇದರ ಇಂಗ್ಲೀಷ್ ಅವತರಣಿಕೆಯನ್ನು ನ್ಯಾಯವಾದಿ ಶ್ರೀ ವೀರಭದ್ರಪ್ಪ ಬಿ. ಹಾಲಭಾವಿಯವರು ಮಾಡಿದ್ದು ಎರಡೂ ಭಾಷೆಯನ್ನು ಒಳಗೊಂಡ ಕೃತಿಯನ್ನು ರಾಯನಗೌಡರ ಸಂಪಾದಕತ್ವದಲ್ಲಿ ಹೊರತಂದಿದ್ದಾರೆ. ಕಿತ್ತೂರಿನ ಇತಿಹಾಸದ ಮೇಲೆ ಬೆಳಕು ಚಲ್ಲುವ ಈ ಕೃತಿ ಕಾವ್ಯಾತ್ಮಕವಾಗಿದೆ.

**ಕಿತ್ತೂರು ಬಂಡಾಯ:**

ಇದು ಕೂಡ ಚನ್ನಮ್ಮರಾಣಿ ಇತಿಹಾಸ ಮಂಡಳ ಬೈಲಹೊಂಗಲ ಇವರು ಪ್ರಕಟಿಸಿದ ಕೃತಿ. ಇದು ಚನ್ನಮ್ಮನ ಲಾವಣಿಯಿಂದ ಪ್ರಾರಂಭವಾಗುತ್ತದೆ. ಇಲ್ಲಿಯೂ ಕೂಡ ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದಂತೆ ರಾಯನಗೌಡರು ವಿವಿಧ ಆಯ್ದ ಲೇಖಕರಿಂದ ಬರೆಸಿ ಪ್ರಕಟಿಸಿದ ಲೇಖನಗಳನ್ನು ಒಳಗೊಂಡ ಸಂಪಾದಿತ ಕೃತಿ. ಇಲ್ಲಿಯೂ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಬರಹಗಳಿವೆ. ತಲ್ಲೂರು ರಾಯನಗೌಡರು ಬರೆದ ಕನ್ನಡ ನಾಡಿನ ರಾಣಿ ಕಿತ್ತೂರು ಚನ್ನಮ್ಮ ಲೇಖನ, ಶ್ರೀ ಕಲ್ಮೇಶ್ವರ ಚನ್ನಮಲ್ಲಪ್ಪ ಶ್ರೇಷ್ಠಿ ಬರೆದ ಕಿತ್ತೂರು ಸಂಸ್ಥಾನದ ಇತಿಹಾಸ, ಶೇ. ಗಿ. ಕಟ್ಟಿಯವರು ಬರೆದ ಕಿತ್ತೂರು ಅರಸರು, ವೀರಪ್ಪ ಬಸರೀಗಿಡದ ಅವರ ಕಿತ್ತೂರು ರಾಜಮನೆತನಗಳು, ಸರಸ್ವತಿದೇವಿ ಗೌಡರರ ಕಿತ್ತೂರು ಚೆನ್ನವ್ವ, ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರೀಯವರ ವೀರರಾಣಿ ಕಿತ್ತೂರು ಚೆನ್ನವ್ವ, ಸೌ. ಪದ್ಮಾವತಿದೇವಿ

ಅಂಗಡಿಯವರ ಕನ್ನಡತಿಯ ಕ್ರಾಂತಿ ಕಿಡಿಯು, ಭಾವೆಪ್ಪ ಮೂಗಿಯವರ ಐತಿಹಾಸಿಕ ಕಾಗದ ಪತ್ರಗಳು, ಎಂ. ಪಿ. ವಾಲಿಯವರ ವೀರ ಕನ್ನಡಿಗರ ಬೀಡು ಕಿತ್ತೂರು, ರಾಜ ಪುರೋಹಿತರವರ ಕಿತ್ತೂರ ದೇಸಗತಿ, ನರಸಿಂಹಾಚಾರ್ಯ ಪುಣೇಕರವರ ಕಿತ್ತೂರ ದೇಶಗತಿ, ಬಸವರಾಜ ಕಟ್ಟೀಮನಿಯವರ ಚನ್ನವ್ವನ ಕಿತ್ತೂರು ನಾಟಕ, ದೇಸಾಯಿ ಪಾಂಡುರಂಗರಾವ ಅವರ ಚೆನ್ನವ್ವ, ಹಿರೇಮಠ ರಾಮಯ್ಯ ಚನಬಸಯ್ಯ ಅವರ ಕಿತ್ತೂರಿನ ಕೊನೆಯ ಕಾಳಗ, ಶೇ. ಗಿ. ಕಟ್ಟಿಯವರ ಕಿತ್ತೂರಿನ ಕೊನೆಯು, ಪೈ. ಇ. ವಲ್ಲದ ಮಲಿಕಸಾಹೇಬ ಬರೆದ ಮಲ್ಲಸರ್ಜ ದೇಸಾಯರ ಸ್ಥಾನ ಬದ್ಧತೆ, ಅಮೃತೇಶರ ಕಿತ್ತೂರು ರಾಜೇಂದ್ರ, ಕಾಸೀರಾಜ ಕವಿಯ ಮಲ್ಲಸರ್ಜ, ರುದ್ರಕವಿಯ ಕಿತ್ತೂರ ಗೀತೆ, ಆನಂದ ಕವಿಯ ಕಿತ್ತೂರು ಕೋಟೆಯ ನೋಟ, ಎಸ್. ಡಿ. ಇಂಚಲರ ಕಳೆದ ಕಿತ್ತೂರು, ಎಸ್. ಡಿ. ಇಂಚಲರೇ ಬರೆದ ಕಿತ್ತೂರ ರಾಣಿಯ ಸಮಾಧಿ ನೋಡಿ (ಕಿತ್ತೂರು ಅರಸರ ಕೋಲುಪದ ಸಂಗ್ರಹದಿಂದ ಆಯ್ದು ಲೇಖನಗಳನ್ನು ಪ್ರಕಟಿಸಲಾಗಿದೆ), ರುದ್ರಕವಿಯ ಸೂಳೆ ಸರ್ಜರ ಪ್ರಣಯ, ಕೊನೆಯಲ್ಲಿ ಶಿವಲಿಂಗ ರುದ್ರಸರ್ಜರ ದತ್ತಕ ಪ್ರಕರಣ, ಈರವ್ವನ ದುರಂತ ಮರಣ, ಶೇ. ಗಿ. ಕಟ್ಟಿಯವರ ಸಂಗೊಳ್ಳಿ ರಾಯನಾಯಕನ ಬಂಡು ಬರಹಗಳೊಂದಿಗೆ ಈ ಸಂಪಾದಿತ ಕೃತಿ ಪ್ರಕಟಗೊಂಡಿದೆ. ಇದರಲ್ಲಿ ಬಹುತೇಕ ದಾಖಲೆಗಳನ್ನು ಪುಣೆಯಿಂದ ಪಡೆಯಲಾಗಿದೆ.

**ವಿವಿಧ ಮಹನೀಯರ ದೃಷ್ಟಿಯಲ್ಲಿ ರಾಯನಗೌಡರು:**

'ತಲ್ಲೂರು ರಾಯನಗೌಡರು ಸಮಗ್ರ ಅಧ್ಯಯನ' ಬಹುಮುಖಿಯಾಗಿ ನಡೆಯುವಂತದ್ದು. ರಾಯನಗೌಡರು ವಿದ್ಯಾರ್ಥಿಯಾಗಿದ್ದಾಗ ಕನ್ನಡ, ಇಂಗ್ಲೀಷ್ ಮತ್ತು ಇತಿಹಾಸ ವಿಷಯಗಳಲ್ಲಿ ಆಸಕ್ತರಿದ್ದರು. ಅವರ ಒಡನಾಟ ನಾಡಿನ ಅನೇಕ ಹಿರಿಯರು ಗಣ್ಯರೊಂದಿಗೆ ಇತ್ತು. ಅವರು ನಿಧನರಾದ ನಂತರ ಅವರ ಅಳಿಯ ಡಾ. ಬಸನಗೌಡ ಆರ್. ಪಾಟೀಲರು 'ಅಗ್ರಗಣ್ಯ ಸ್ವಾತಂತ್ರ್ಯಯೋಧ ತಲ್ಲೂರು ರಾಯನಗೌಡರು ಜೀವನ ದರ್ಶನ' ಎಂಬ ಕೃತಿಯನ್ನು ೨೦೧೦ ರಲ್ಲಿ ಪ್ರಕಟಿಸಿದರು. ಆ ಕೃತಿಯಲ್ಲಿ ರಾಯನಗೌಡರನ್ನು ಹತ್ತಿರದಿಂದ ಕಂಡಿರುವ ಅವರ ಒಡನಾಡಿಗಳು ತಮ್ಮ ಹಾಗೂ ರಾಯನಗೌಡರ ಸಂಬಂಧ ಹೇಗಿತ್ತು ಅವರ ಬದುಕಿನ ಪುಟಗಳನ್ನು ತಮ್ಮ ಬರವಣಿಗೆಯಲ್ಲಿ ಪ್ರಕಟಿಸಿರುವರು.

ಸ್ವಾತಂತ್ರ್ಯ ಹೋರಾಟಗಾರರಾಗಿ ಕರ್ನಾಟಕ ಏಕೀಕರಣ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ಉತ್ತಮ ವಾಗ್ಮಿಗಳಾಗಿ, ಸಂಶೋಧಕರಾಗಿ, ಲೇಖಕರಾಗಿ, ಸಾಮಾಜಿಕ ಕಾರ್ಯಕರ್ತರಾಗಿ, ಚಿಂತನಶೀಲರಾಗಿ, ರಾಜಕೀಯ

ದುರೀಣರಾಗಿ ಬಾಳಿ ಬದುಕಿದ್ದ ತಲ್ಲೂರು ರಾಯನಗೌಡರು ೩೦–೯–೧೯೮೨ ರಂದು ನಿಧನರಾದರು. ಅವರ ಹೆಸರಿನಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದತ್ತಿನಿಧಿಯನ್ನು ಅವರ ಕುಟುಂಬದವರು ಸ್ಥಾಪಿಸಿದ್ದು ಪ್ರತಿವರ್ಷ ಆ ದತ್ತಿಯ ಮೂಲಕ ರಾಯನಗೌಡರ ಸ್ಮರಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಾಯನಗೌಡರ ಸ್ಮರಣೆಯನ್ನು ಚಿರಸ್ಥಾಯಿಯಾಗಿಸಿರುವರು. ಕಿತ್ತೂರು ಚನ್ನಮ್ಮ ಚಲನಚಿತ್ರವಾಗಲು ಕೂಡ ಕಾರಣೀಭೂತರಾಗಿದ್ದ ರಾಯನಗೌಡರು ಈ ನಾಡಿಗೆ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಬಹುದೊಡ್ಡ ಕೊಡುಗೆಯನ್ನು ನೀಡಿರುವರು.

**ಪರಾಮರ್ಶನ ಗ್ರಂಥಗಳು:**


೧. ಕರ್ನಾಟಕ ಏಕೀಕರಣ ಇತಿಹಾಸ (೨೦೨೦), ಡಾ. ಎಚ್. ಎಸ್. ಗೋಪಾಲರಾವ್, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

೨. ಸಂಶೋಧಕ ಸಾಹಿತಿ ತಲ್ಲೂರು ರಾಯನಗೌಡರು (೨೦೧೦), ಸಂ. ಡಾ. ಬಸನಗೌಡ ಆರ್. ಪಾಟೀಲ, ತಲ್ಲೂರ ರಾಯನಗೌಡ ಸ್ಮಾರಕ ವಿಶ್ವಸ್ಥ ಸಂಸ್ಥೆ ಬೆಂಗಳೂರು.

೩. ಕಿತ್ತೂರು ಸಂಸ್ಥಾನ ಸಾಹಿತ್ಯ (೨೦೧೫), ಡಾ .ಎಂ. ಎಂ. ಕಲಬುರ್ಗಿ. ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಎಡೆಯೂರು, ಡಂಬಳ, ಗದಗ.

೪. ತಲ್ಲೂರ ರಾಯನಗೌಡರು (೧೯೯೧), ಆರ್. ಎಫ್. ತಳವಾರ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಎಡೆಯೂರು, ಡಂಬಳ, ಗದಗ.

೫. ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಲಿಂಗಾಯಿತರ ಪಾತ್ರ (೧೯೯೮), ಸಂ. ಡಾ. ಎಂ. ಎಂ. ಕಲಬುರ್ಗಿ ಮತ್ತು ಎಚ್.ಎಸ್.ಪಾಟೀಲ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಎಡೆಯೂರು, ಡಂಬಳ, ಗದಗ.

೬. ಸಂಶೋಧನೆಯ ಸ್ವರೂಪ (೨೦೧೮), ಡಾ.ಬಿ ವ್ಹಿ.ಶಿರೂರ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.